| 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

ಎಸ್ ಸಿ 110/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಇಮ್ರಾನ್ | ಫ್ರಾಸಾ | 5 |
| ತಂದೆ ಹೆಸರು | ಃ | ಸರ್ದಾರ್ | ಚಾಸಾ | 6 |
| ವಯಸ್ಸು | ಃ | 37 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 06.04.2024 | |
| ವೃತ್ತಿ | ಃ | ಫ್ಯಾಕ್ಟರಿ ಕೆಲಸ | | |
| ವಾಸ ಸ್ಥಳ | ಃ | ನಂಜನಗೂಡು | | |

ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ

1. ಈಗ ನನಗೆ ತೋರಿಸಿದ ದಾಖಲೆ ಮೇಲೆ ನನ್ನ ಸಹಿ ಇದೆ. ನಂಜನಗೂಡು ಟೌನ್ ಪೊಲೀಸರು ನಾನು ಪಂಚರಾಗಿರಬೇಕೆಂದು ವಿಷಯ ತಿಳಿಸಿ ನೋಟೀಸನ್ನು ಕೊಟ್ಟಿರುತ್ತಾರೆ. ಸುಮಾರು ಎರಡು ವರ್ಷದ ಹಿಂದೆ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ಆ ನೋಟೀಸ್ ನ್ನು ನನಗೆ ನೀಡಿರುತ್ತಾರೆ. ಚಾಸಾ 5 ರವರು ಕೂಡ ಇದ್ದರು. ನಾನು ಮತ್ತು ಚಾಸಾ 5 ರವರು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇವೆ. ಚಾಸಾ 5 ರವರಿಗೂ ಸಹ ನನ್ನಂತೆಯೇ ನಂಜನಗೂಡು ಟೌನ್ ಪೊಲೀಸರು ಪಂಚರಾಗಿರಬೇಕೆಂದು ವಿಷಯ ತಿಳಿಸಿ ನೋಟೀಸ್ ನ್ನು ನೀಡಿರುತ್ತಾರೆ. ನಿಪಿ 5 ನೋಟೀಸನಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 5(ಬಿ) ಎಂದು ಗುರುತಿಸಲಾಯಿತು.

2. ಆರೋಪಿಯು ಸದರಿ ನೋಟೀಸ್ ಗೆ ಸಹಿ ಮಾಡಿರುವ ವಿಚಾರ ಗೊತ್ತಿಲ್ಲ. ಈಗ ನನಗೆ ತೋರಿಸಿದ ಮತ್ತೊಂದು ದಾಖಲೆ ಮೇಲೆ ನನ್ನ ಸಹಿ ಇದೆ. ಅಂತೆಯೇ ಚಾಸಾ 6 ರವರೂ ಸಹ ಅದಕ್ಕೆ ಸಹಿ ಮಾಡಿದ್ದಾರೆ. ಪೊಲೀಸರು ಹೊಳೆಯ ಬಳಿ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ಆ ದಾಖಲೆಗೆ ನನ್ನ ಮತ್ತು ಚಾಸಾ 6 ರವರ ಸಹಿಯನ್ನು ಪಡೆದಿರುತ್ತಾರೆ. ನಿಪಿ 6 ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ 6(ಬಿ) ಎಂದು ಗುರುತಿಸಲಾಯಿತು.

3. ಪಂಚನಾಮೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ.

(ಸರ್ಕಾರಿ ಅಬಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ**

4. ದಿಃ 15.12.2021 ರಂದು ಸಂಜೆ 4 ಗಂಟೆ ಸಮಯದಲ್ಲಿ ನಂಜನಗೂಡು ಟೌನ್ ಪೊಲೀಸರು ನನಗೆ ಮತ್ತು ಚಾಸಾ 5 ರವರಿಗೆ ನಿಪಿ 5 ರಂತೆ ನೋಟೀಸನ್ನು ಕೊಟ್ಟು , ಆರೋಪಿಯು ಕಪಿಲಾ ನದಿಯಲ್ಲಿ ತನ್ನ ಹೆಂಡತಿಯನ್ನು ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿರುವ ಸ್ಥಳವನ್ನು ಆರೋಪಿಯು ತೋರಿಸಿದ ಮೇರೆಗೆ ಪೊಲೀಸರು ನನ್ನ ಹಾಗೂ ಚಾಸಾ 5 ರವರ ಸಮಕ್ಷಮ ನಿಪಿ 6 ರಂತೆ ಮಹಜರ್ ಮಾಡಿ ಮಹಜರ್ ನ ಅಂಶಗಳನ್ನು ನಮಗೆ ಓದಿ ತಿಳಿಸಿ ನನ್ನ ಹಾಗೂ ಚಾಸಾ 5 ರವರ ಸಹಿಯನ್ನು ಅದಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅಂತೆಯೇ ನಿಪಿ 5 ಮತ್ತು 6 ಕ್ಕೆ ನಮ್ಮ ಸಮಕ್ಷಮ ಪೊಲೀಸರು ಆರೋಪಿಯ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

5. ಈ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ**

ಇಲ್ಲ ಎಂದು ಹೇಳುತ್ತಾರೆ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು